ಕಲ್ಪನೆ ಕಾವ್ಯ

# ಗೊಂಬೆಗಳ ಸಂಭಾಷಣೆ

ಮನುಜನು ಮಾಡಿಹನು
ನಮ್ಮನ್ನು ಹುಲ್ಲಿನಿಂದ
ಕಲ್ಪನಾಶಕ್ತಿಗೊಂದು ಮೆಚ್ಚುಗೆ
ನಿನಗಿದೋ ಮಾನವ!

ಕರೆಯಬೇಡ ನನ್ನನ್ನು
ನೀನು ಬೆಚ್ಚಪ್ಪನೆಂದು
ಕರೆಯಲೇ ನಿನ್ನನ್ನು
ನಾನು ಬೆಚ್ಚಮ್ಮಳೆಂದು?

ಹುಲ್ಲಿನ ರಾಜನೇ
ಹೀಗೇಕೆ ಓರೆನೋಟದಿ ನೋಡುವೆ?
ಹೇಳು ನೀನು
ನಾನಷ್ಟು ಚೆಲುವೆಯೇ?

ಹುಲ್ಲಿನ ರಾಣಿಯೇ ಬೀಗಬೇಡ
ನೀ ಸುಂದರಿಯೆಂದು
ನಾವೆಲ್ಲಿಯ ಶಾಶ್ವತ
ಮಾನವನೇ ನಶ್ವರವೆಂದಮೇಲೆ?

ಸಾಕುಬಿಡು ಈ ವೇದಾಂತ
ನೀ ನನ್ನ ಪ್ರಾಣ ಸಖ
ನಾ ನಿನ್ನ ಪ್ರಾಣ ಸಖಿ
ಆಶಿಸು ನಮಗೆ ಸುಖಾಂತ್ಯ!

● **ಸುಪ್ರೀತಾ ವೆಂಕಟ್**



# ಮತ್ತೆ ಜೋಡಿಯಾಗೋಣ

‘ಮರಿಯಾ, ಮೈ ಡಾರ್ಲಿಂಗ್...
ನಗುವ ಹೂವಂತೆ ಸೊಗಸೂ...’
ಹಾಡಿನ ಲಯಕ್ಕೆ
ಶಿಳ್ಳೆ ಹೊಡೆದು, ತುಂಟ ನಗೆ ನಕ್ಕ ಜಾನು.
ಎಂದಿನಂತಿರದ ಮರಿಯಾಳ ದನಿಯ ತುಂಬ
ದುಗುಡ... ‘ಕೊಟ್ಟಿಗೆಯ ದನಕರುವಿಗೆ
ಮೇವಾಗಿ ಹೋಗುವೆವೆಂದೋ!
ಜಾನು, ನನ್ನ ಪ್ರೀತಿಯ ನಲ್ಲ,
ನಮ್ಮೀ ಮಧುರ ಒಡನಾಟ ಇನ್ನೆನಿತು
ದಿನವೋ ದೇವನೇ ಬಲ್ಲ.’
ಭರವಸೆಯ ಬೆಳ್ಳಿ ಬೆಳಕ ಕಣ್ಣಲಿ
ಸೂಸುತ, ನಲ್ಮೆಯ ಮಾತನಾಡಿದ
ಜಾನು, ‘ಚಿಂತೆಯೇಕೆ ನನ್ನ ಮುದ್ದು
ನಲ್ಲೆ? ದನಕರುವಿಗೆ ಮೇವಾದರೇನು
ಹೊರಬರಲೇಬೇಕು, ನಾನು, ನೀನು...
ಒಟ್ಟಿಗೆ, ಕೊಟ್ಟಿಗೆ ಗೊಬ್ಬರವಾಗಿ,
ಮಣ್ಣ ಹಣ್ಣಾಗಿಸೋಣ, ಪಚ್ಚೆ ಪೈರ
ಹಸಿರಾಗಿ, ಉಸಿರಾಡೋಣ
ಬೆಳೆಯೋಣ, ಕಾಲಚಕ್ರವುರುಳೆ
ಗುಂಪಾಗಿ ಅರಳೋಣ
ಮತ್ತೆ ಜೋಡಿನಾವಾಗೋಣ
ನೀನಾಗು ನನ್ನ ಮುದ್ದು ಮರಿಯಾ
ನಾನಾಗುವೆ ನಿನ್ನ ಪ್ರೀತಿಯ ಜಾನು
ಈ ಮಧುರ ಒಡನಾಟ ಮರಳದೇನು?

● **ನಳಿನಿ ಆರ್.**